# *4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು*

*ಎಸ್‌ಸಿ.* **110/2017**

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ ಶ್ರೀ ವಿನಯ ಕುಮಾರ | | *ಪ್ರಮಾಣ ಮಾಡಿಸಿದ ದಿನಾಂಕಃ* |
| ತಂದೆ/ಗಂಡನ ಹೆಸರು | ಃ ಶ್ರೀ ನಾಗೇಂದ್ರ | | **06.03.2021** |
| ವಯಸ್ಸು | ಃ **30** ವರ್ಷ | | |
| ವೃತ್ತಿ | ಃ ಹಸು ಮತ್ತು ಹಾಲು ವ್ಯಾಪಾರ | ಪ್ರಾ.ಸಾ. ಃ | **14** |
| ವಾಸಸ್ಥಳ | ಃ ವಿವಿ ಮೊಹಲ್ಲಾ | ಚಾ.ಸಾ. ಃ | **23** |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

ನಾನು ಕಳೆದ ***10-15*** ವರ್ಷಗಳಿಂದ ವಿವಿ ಮೊಹಲ್ಲಾದಲ್ಲಿ ಹಸು ಮತ್ತು ಹಾಲು ವ್ಯಾಪಾರ ಮಾಡುತ್ತಿದ್ದೇನೆ. ನಾನು ಪ್ರತಿನಿತ್ಯ ಬೆಳಿಗ್ಗೆ ***07*** ಗಂಟೆಗೆ ಹಸುಗಳನ್ನು ಮೇಯಲು ಬಿಟ್ಟು ಬೆಳಿಗ್ಗೆ ***10*** ರ ವೇಳೆಗೆ ಹಸುಗಳನ್ನು ನೋಡಿಕೊಂಡು ಬರುವ ಕೆಲಸ ಮಾಡುತ್ತೇನೆ. ದಿನಾಂಕ ***23.12.2016*** ರಂದು ಬೆಳಿಗ್ಗೆ ***10.25*** ಗಂಟೆಗೆ ಟೆಂಪಲ್ ರಸ್ತೆಯಿಂದ ***6*** ನೇ ಮುಖ್ಯ ರಸ್ತೆ ಕಡೆಗೆ ಹೋಗುತ್ತಿದ್ದೆ. ಪೋಸ್ಟ ಆಫೀಸ್ ಪಕ್ಕ ಸ್ಯಾಂಟ್ರೋ ಕಾರಿನ ಪಕ್ಕ ***1*** ರಿಂದ ***5*** ನೇ ಆರೋಪಿಗಳು ನಿಂತಿದ್ದರು. ನಾನು ಸೈಕಲ್ ನಲ್ಲಿ ಕಾರನ್ನು ದಾಟಿಕೊಂಡು ಮುಂದೆ ಹೋದಾಗ ಅದೇ ಕಾರು ನನಗೆ ಹಿಂದಿನಿಂದ ಬಂದಿರುತ್ತದೆ. ನನಗೆ ಮುಂದುಗಡೆಯಿಂದ ಒಂದು ಸ್ಕೂಟರ್ ನಲ್ಲಿ ಒಬ್ಬ ವ್ಯಕ್ತಿ ಬಂದಿದ್ದರು. ನನ್ನ ಹಿಂದಿನಿಂದ ಬಂದ ಕಾರು ಸ್ಕ್ಯಾಟರ್ ಗೆ ಡಿಕ್ಕಿ ಪಡಿಸಿದ ಪರಿಣಾಮ ಸ್ಕೂಟರ್ ನಲ್ಲಿ ಇದ್ದ ವ್ಯಕ್ತಿ ಕೆಳಗೆ ಬದ್ದಿದ್ದು ಕಾರಿನಿಂದ ಇಳಿದ ***5*** ಜನ ವ್ಯಕ್ತಿಗಳು ಸದರಿ ವ್ಯಕ್ತಿಯ ಮೇಲೆ ಮಚ್ಚಿನಿಂದ ತಲೆ ಮತ್ತು ಕೈಕಾಲುಗಳಿಗೆ ಹಲ್ಲೆ ಮಾಡಿದ್ದಾರೆ. ಹಲ್ಲೆ ಮಾಡಿದ ರಭಸಕ್ಕೆ ಸಂಜು ಅವರ ಕೈಯಲ್ಲಿ ಇದ್ದ ಮಚ್ಚು ಕೆಳಗೆ ಬಿದ್ದಿತ್ತು. ಸದರಿ ***5*** ಜನ ವ್ಯಕ್ತಿಗಳು ಕಾರಿನಲ್ಲಿ ಹೊರಟು ಹೋಗಿದ್ದಾರೆ. ನಾನು ಹಲ್ಲೆಗೆ ಒಳಪಟ್ಟ ವ್ಯಕ್ತಿಯ ಹತ್ತಿರ ಹೋಗಿ ನೋಡಿದಾಗ ಒಬ್ಬ ಹುಡುಗ ಚಿಕ್ಕಪ್ಪ ಚಿಕ್ಕಪ್ಪ ಎಂದು ಕೂಗಿದ್ದು ಹಲ್ಲೆಗೆ ಒಳಗಾದ ವ್ಯಕ್ತಿ ಉಸಿರಾಡುತ್ತಿದ್ದು ಸದರಿ ವ್ಯಕ್ತಿಯನ್ನು ಸದರಿ ಹುಡುಗ ವ್ಯಾನಿನಲ್ಲಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದಾರೆ. ಹಲ್ಲೆಗೆ ಒಳಪಟ್ಟ

ವ್ಯಕ್ತಿಯ ಹೆಸರು ಶ್ರೀ ಕೃಷ್ಣ ಎಂದು ನಂತರದಲ್ಲಿ ತಿಳಿಯಿತು. ಚಿಕ್ಕಪ್ಪ ಚಿಕ್ಕಪ್ಪ ಎಂದು ಕೂಗಿದ ಹುಡುಗನ ಹೆಸರು ತಿಳಿದಿಲ್ಲ.

ದಿನಾಂಕ *25.12.2016* ರಂದು ನಾನು ವಿವಿ ಪುರಂ ಪೋಲಿಸ ಠಾಣೆಗೆ ಹೋಗಿ ಹಲ್ಲೆ ಮಾಡಿದ ವ್ಯಕ್ತಿಗಳನ್ನು ನಾನು ನೋಡಿರುವುದಾಗಿ ಮತ್ತು ಗುರುತಿಸುವುದಾಗಿ ಪೊ.ಅಧಿಕಾರಿ ಸಮಕ್ಷಮ ಹೇಳಿದ ಮೇರೆಗೆ ಪೊ.ಅಧಿಕಾರಿ ನನ್ನ ಹೇಳಿಕೆಯ ಬಗ್ಗೆ ಖಾತ್ರಿ ಪಡಿಸಿಕೊಂಡು ರೂಂ ನಲ್ಲಿ ಇದ್ದ *5* ಜನ ವ್ಯಕ್ತಿಗಳನ್ನು ತೊರಿಸಿದ್ದು ನಾನು ಗುರುತಿಸಿದ್ದೇನೆ. ನ್ಯಾಯಾಲಯದಲ್ಲಿ ಹಾಜರು ಇರುವ *2* ರಿಂದ *5* ನೇ ಆರೋಪಿಗಳನ್ನು ನೋಡಿ ಗುರುತಿಸಿದ್ದೇನೆ. *1* ನೇ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. *1* ಮತ್ತು *2* ರಿಂದ *5* ನೇ ಆರೋಪಿಗಳು ಕೃಷ್ಣ ಅವರ ಮೇಲೆ ಹಲ್ಲೆ ಮಾಡಿದ್ದಾರೆ. ಪೊ.ಅಧಿಕಾರಿ ನನ್ನ ಹೇಳಿಕೆ ಪಡೆದು ನನಗೆ ಓದಿ ಹೇಳಿದ್ದಾರೆ.

*2* ದಿನ ಮೊದಲು ಕೋರ್ಟನಿಂದ ಬಂದ ವ್ಯಕ್ತಿ ದಿನಾಂಕ *17.01.2017* ನ್ಯಾಯಾಲಯಕ್ಕೆ ಹಾಜರು ಆಗುವಂತೆ ಹೇಳಿದ ಮೇರೆಗೆ ನಾನು ದಿನಾಂಕ *17.01.2017* ರಂದು ನ್ಯಾಯಾಲಯಕ್ಕೆ ಹಾಜರು ಆಗಿ ನ್ಯಾಯಾಧೀಶರ ಸಮಕ್ಷಮ ನಿಪಿ-*67* ರಂತೆ ಹೇಳಿಕೆ ಕೊಟ್ಟಿದ್ದೇನೆ. ನಿಪಿ-*67* (ಎ) ನನ್ನ ಸಹಿಯಾಗಿದೆ. ಸ್ಯಾಂಟ್ರೊ ಕಾರಿನ ಫೋಟೊವನ್ನು ನೋಡಿದರೆ ಗುರುತಿಸುತ್ತೇನೆ. ಇದನ್ನು ಈಗಾಗಲೇ ನಿಪಿ-*65* ರಂತೆ ಗುರುತಿಸಲಾಗಿದೆ.

**ಪಾಟೀ ಸವಾಲು : ಆರೋಪಿ ಪರ ವಕೀಲರ ಕೋರಿಕೆ ಮೇರೆಗೆ ಮುಂದೂಡಲಾಯಿತು.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

*ಓ ಹೇ ಕೇ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
*ಮೈಸೂರು*